**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ</u>**

**<u>ಸ್ಪೆಷಲ್ ಕೇಸ್ ನಂಃ 75/2024</u>** <u>ಪಿ.ಡಬ್ಲ್ಯುಃ 8</u>

| | |
|---|---|
| ಸಾಕ್ಷಿದಾರರ ಹೆಸರು | ರಾಘವೇಂದ್ರ |
| ತಂದೆಯ ಹೆಸರು | ದಿಃ ಚಂದ್ರಶೇಖರ ರಾವ್ |
| ವಯಸ್ಸು | 52 ವರ್ಷ |
| ಉದ್ಯೋಗ | ಹೆಚ್ ಸಿ 02,ಹಿರಿಯಡ್ಕ ಪೊಲೀಸ್ ಠಾಣೆ |
| ವಿಳಾಸ | ಹಿರಿಯಡ್ಕ |

ದಿನಾಂಕಃ 25-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು 2017 ರಿಂದ 2024 ರವರೆಗೆ ಉಡುಪಿಯ ಸೆನ್ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿನಾಂಕ 27-09-2023 ರಂದು ಈ ಕೇಸಿನಲ್ಲಿ 7 ನೇ ಆರೋಪಿತನ ಮೇಲೆ ಹೊರಡಿಸಿದ proclamation ನ್ನು ಪ್ರಸಿದ್ದಿಪಡಿಸಲು ಠಾಣೆಯಿಂದ ಹೊರಟು, ಆರೋಪಿಯ ವಿಳಾಸದ ವಾಸದ ಮನೆ, ಪಂಚಾಯಿತಿಯ ಕಚೇರಿ, ಹಾಗೂ ತಹಶೀಲ್ದರ್ ಕಚೇರಿಗೆ ಹೋಗಿ proclamation ನ್ನು ಪ್ರಸಿದ್ಧಿಪಡಿಸಿ, ಅದಕ್ಕಾಗಿ ಪಂಚರನ್ನು ಕರೆದುಕೊಂಡು, ಹೋಗಿ, ಪ್ರಸಿದ್ದಿ ಮಾಡಿದ ಬಗ್ಗೆ ಪಂಚನಾಮೆಯನ್ನು ದಾಖಲಿಸಿದ್ದೆ. ಸದರಿ ಪಂಚನಾಮೆಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-30 ಎಂದು, ಅದರಲ್ಲಿಯ ನನ್ನ ಸಹಿಯನ್ನು ನಿಶಾನೆ ಪಿ-30(ಎ) ಎಂದು, ಮತ್ತು ಸಾಕ್ಷಿದಾರರ ಸಹಿಗಳನ್ನು ನಿಶಾನೆ ಪಿ-30(ಬಿ) ಮತ್ತು 30(ಸಿ) ಎಂದು ಗುರುತಿಸಿದೆ. ಅದೇ ದಿನ ಆರೋಪಿಯ ಆಸ್ತಿ ವಿವರಗಳನ್ನು ಕೋರಿ ಕಾಸರಗೋಡು ತಹಶೀಲ್ದಾರ್ ಗೆ ಅರ್ಜಿ ಕೊಟ್ಟಿದ್ದೆ. ಸದರಿಯವರು ಕೊಟ್ಟ ವರದಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-31 ಎಂದು ಗುರುತಿಸಿದ್ದೇನೆ.

ಪಾಟಿಸವಾಲುಃ ಆರೋಪಿ ತಲೆತಪ್ಪಿಸಿಕೊಂಡಿದ್ದರಿಂದ ಇಲ್ಲ ಎಂದು ತೆಗೆದುಕೊಂಡಿತು.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.